# ಇಗೋ ನಿಮಗೆ ದೊರಕಿದೆ ಮಾಹಿತಿ ಪಡೆಯುವ ಹಕ್ಕು

**ಕೇಂದ್ರ ಹಾಗು ರಾಜ್ಯ ಸರ್ಕಾರದ ಇಲಾಖೆಗಳಿಂದ, ಸ್ಥಳೀಯ ಸಂಸ್ಥೆಗಳಿಂದ ನಿಮಗೆ ಮಾಹಿತಿ ದೊರಕುತ್ತಿಲ್ಲವೆ?**
**ನೀವು ಸಲ್ಲಿಸಿದ ಅರ್ಜಿ, ಕಾಗದ, ಪತ್ರಗಳಿಗೆ ನಿಗದಿತ ಅವಧಿಯಲ್ಲಿ ಉತ್ತರ ದೊರೆಯುತ್ತಿಲ್ಲವೆ?**
**ನಿಮ್ಮ ಕುಂದು ಕೊರತೆಗಳಿಗೆ ಸರ್ಕಾರದ ಇಲಾಖೆಗಳು ಶೀಘ್ರವಾಗಿ ಸ್ಪಂದಿಸುತ್ತಿಲ್ಲವೆ?**
**ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ವಿವರ ದೊರೆಯುತ್ತಿಲ್ಲವೆ?**
**ನಿಮಗೆ ಬರಬೇಕಾದ ಅನುದಾನದ ಬಿಡುಗಡೆಯಲ್ಲಿ ವಿಳಂಬ ಆಗುತ್ತಿದಿಯೇ?**

**ನಮ್ಮ ಬದುಕಿನ ಮೇಲೆ ಪರಿಣಾಮ ಬೀರುವ ಮಾಹಿತಿಯನ್ನು, ನೋಡೋಣ ಹಾಗು ಪ್ರಚಾರ ಪಡಿಸೋಣ**




ಚಿಂತಿಸಬೇಡಿ. ಈಗ ಇದಕ್ಕೆಲ್ಲಾ ಪರಿಹಾರ ದೊರಕಿದೆ. ಇನ್ನು ಮುಂದೆ ನೀವು ಲಂಚ ನೀಡಬೇಕಾಗಿಲ್ಲ. ಅಸಹಾಯಕರಾಗಿ ಬ್ರಷ್ಟಾಚಾರವನ್ನು ಪ್ರೋತ್ಸಾಹಿಸಬೇಕಿಲ್ಲ. ಹತಾಷರಾಗಬೇಕಿಲ್ಲ. ಯಾರ ಮಧ್ಯವರ್ತಿಕೆ ಇಲ್ಲದೆ ನಿಮ್ಮ ಕೆಲಸವನ್ನು ನೀವೇ ಮಾಡಿಸಿಕೊಳ್ಳಬಹುದು. ಇದಕ್ಕೆ ನೀವು ಹೆಚ್ಚಿನ ಶ್ರಮ ಪಡಬೇಕಿಲ್ಲ. ಹೆಚ್ಚಿನ ಹಣವನ್ನೂ ಖರ್ಚು ಮಾಡಬೇಕಿಲ್ಲ. ಮಾಹಿತಿ ಹಕ್ಕು ಕಾನೂನನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕಷ್ಟೆ.
ಕೇಂದ್ರ ಸರ್ಕಾರ ೧೨ನೇ ಅಕ್ಟೋಬರ್ ೨೦೦೫ ರಿಂದ ಮಾಹಿತಿ ಹಕ್ಕು ಕಾನೂನನ್ನು ಜಾರಿಗೊಳಿಸಿದೆ. ಈ ಕಾನೂನಿನ ಪ್ರಕಾರ (ಕೆಲವೊಂದು ಮಾಹಿತಿ ಹೊರತುಪಡಿಸಿ) ನೀವು ಸರ್ಕಾರಿ ಕಚೇರಿಗಳಲ್ಲಿರುವ ಕಡತಗಳನ್ನು ಹಾಗು ದಾಖಲೆಗಳನ್ನು ಪರಿಶೀಲಿಸಬಹುದು. ದಾಖಲೆಗಳ ಪ್ರಮಾಣೀಕರಿಸಿದ ಪ್ರತಿಯನ್ನು ಪಡೆಯಬಹುದು. ಸಾರ್ವಜನಿಕ ಕಾಮಗಾರಿ ಕೆಲಸಗಳನ್ನು ಪರೀಕ್ಷಿಸಬಹುದು.

## ಮಾಹಿತಿ ಹಕ್ಕು ಕಾನೂನನ್ನು ಬಳಸಲು ನೀವು ಮಾಡಬೇಕಾದ್ದು ಇಷ್ಟೆ:

* ನಿಮಗೆ ಯಾವ ಮಾಹಿತಿ ಬೇಕೋ ಅದನ್ನು ಗುರುತಿಸಿ
* ನಿಮಗೆ ಬೇಕಿರುವ ಮಾಹಿತಿ ಯಾವ ಇಲಾಖೆ ಅಥವ ಸಂಸ್ಥೆಗೆ ಸೇರಿದ್ದು ಎಂಬುದನ್ನು ಖಾತ್ರಿಪಡಿಸಿಕೊಳ್ಳಿ.
* ಪ್ರತಿಯೊಂದು ಸರ್ಕಾರಿ ಕಚೇರಿಯಲ್ಲೂ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ನೇಮಕ ಮಾಡಲಾಗಿದೆ. ಆ ಅಧಿಕಾರಿ ಯಾರೆಂದು ತಿಳಿದುಕೊಳ್ಳಿ. ಹಾಗೊಮ್ಮೆ ತಿಳಿದುಕೊಳ್ಳದಿದ್ದರೂ ಚಿಂತೆಯಿಲ್ಲ.
* ಅರ್ಜಿಯನ್ನು ಸಿದ್ದಪಡಿಸಿ (ಅರ್ಜಿ ನಮೂನೆಯನ್ನು ಹಿಂಬದಿಯಲ್ಲಿ ನೀಡಲಾಗಿದೆ)
* ನಿಮ್ಮ ಹೆಸರು, ವಿಳಾಸ, ಅಗತ್ಯವಾದ ಮಾಹಿತಿ ಹಾಗು ಅದು ಯಾವ ವರ್ಷಕ್ಕೆ ಸಂಬಂಧಪಟ್ಟಿದ್ದು ಎಂಬುದನ್ನು ನಮೋದಿಸಿ. ನಿಮ್ಮ ಸಹಿ ಇರಬೇಕಾದ್ದು ಅಗತ್ಯ. ಅರ್ಜಿಯಲ್ಲಿ 'ಸಾರ್ವಜನಿಕ ಮಾಹಿತಿ ಅಧಿಕಾರಿ' ಗೆ ಎಂದು ನಮೋದಿಸಿ. ಸಂಬಂಧಪಟ್ಟ ಇಲಾಖೆ ಹಾಗು ವಿಳಾಸವನ್ನು ಸ್ಪಷ್ಟವಾಗಿ ನಮೋದಿಸಿ.

ಅರ್ಜಿ ಶುಲ್ಕ ಹತ್ತು ರೂಪಾಯಿ. ಈ ಶುಲ್ಕ ಭಾರತೀಯ ಪೋಸ್ಟಲ್ ಆರ್ಡರ್, ಮನಿ ಆರ್ಡರ್, ಅಥವ ಡಿಡಿ ಮಾದರಿಯಲ್ಲಿರಬಹುದು. ಕಚೇರಿಯಲ್ಲಿ ನಗದು ಮೂಲಕ ಪಾವತಿಸಬಹುದು.

ಅರ್ಜಿಯ ಪ್ರತಿಯೊಂದನ್ನು ನಿಮ್ಮ ಬಳಿ ಇರಿಸಿಕೊಳ್ಳಿ.ಅರ್ಜಿಯನ್ನು ಸಲ್ಲಿಸಿ ಅದಕ್ಕೆ ಸೂಕ್ತ ಸ್ವೀಕೃತಿ ಪಡೆಯಿರಿ.

ನೀವು ಕೇಳಿರುವ ಮಾಹಿತಿಗೆ ಹೆಚ್ಚುವರಿ ಶುಲ್ಕ ಪಾವತಿಸಬೇಕಾಗುತ್ತದೆ. ಅದು ಪುಟವೊಂದಕ್ಕೆ ಎರಡು ರೂಪಾಯಿಗಳು. ನೀವು ಬಡತನ ರೇಖೆಗಿಂದ ಕೆಳಗಿನವರಾದರೆ ಅರ್ಜಿ ಶುಲ್ಕವಾಗಲಿ ಅಥವ ಹೆಚ್ಚುವರಿ ಶುಲ್ಕವಾಗಲಿ ಪಾವತಿಸಬೇಕಿಲ್ಲ. ಆದರೆ ನೀವು ಕೇಳಿರುವ ಮಾಹಿತಿ ಒಂದು ನೂರು ಪುಟಗಳಿಗೆ ಮೀರಿದರೆ ಅದಕ್ಕೆ ಹೆಚ್ಚುವರಿ ಶುಲ್ಕ ಪಾವತಿಸಬೇಕಾಗುತ್ತದೆ.

ಅರ್ಜಿಸಲ್ಲಿಸಿದ ಮೂವತ್ತು ದಿನಗಳಲ್ಲಿ ನಿಮಗೆ ಮಾಹಿತಿ ದೊರೆಯುತ್ತದೆ. ಹಾಗೊಮ್ಮೆ ದೊರೆಯದಿದ್ದರೆ ಮೇಲ್ಮನವಿ ಸಲ್ಲಿಸಬಹುದು ಇಲ್ಲವೆ ಕರ್ನಾಟಕ ಮಾಹಿತಿ ಆಯೋಗದಲ್ಲಿ ದೂರು ಸಲ್ಲಿಸಬಹುದು.

**ಕರ್ನಾಟಕ ಮಾಹಿತಿ ಆಯೋಗ,**
೩ನೇ ಮಹಡಿ, ೩ನೇ ಹಂತ, ಬಹು ಮಹಡಿ ಕಟ್ಟಡ,
ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು – 560 001

ನಮಗೆ ದೊರೆಯಬೇಕಾದ ಸೌಲಭ್ಯ, ಸೌಲತ್ತುಗಳನ್ನು ಪಡೆಯೋಣ.
ಒಟ್ಟಾರೆ ಸಮಾಜದ ಅಭ್ಯುದಯಕ್ಕೆ ಸಹಕರಿಸೋಣ.




**ಮಾಹಿತಿ ಹಕ್ಕು ಕಾನೂನು [ಸೆಕ್ಷನ್ ೬(೧)ರ ಅನ್ವಯ ಸಲ್ಲಿಸಬೇಕಾದ ಅರ್ಜಿ]**

ಗೆ,
ಸಾರ್ವಜನಿಕ ಮಾಹಿತಿ ಅಧಿಕಾರಿ
(ಸಂಬಂಧಪಟ್ಟ ಇಲಾಖೆ)

ಅರ್ಜಿದಾರರ ಹೆಸರು
ವಿಳಾಸ
ಅಗತ್ಯವಿರುವ ಮಾಹಿತಿ
ಮಾಹಿತಿ ಯಾವ ವರ್ಷಕ್ಕೆ ಸಂಬಂಧಪಟ್ಟಿದ್ದು
ಅರ್ಜಿ ಶುಲ್ಕದ ವಿವರ

ದಿನಾಂಕ
ಸ್ಥಳ ಸಹಿ

**ಮಾಹಿತಿ ಹಕ್ಕು ಬಳಸೋಣ**

**ಸ್ವಚ್ಛ ಆಡಳಿತ ನಿರ್ಮಿಸೋಣ**

**ಭ್ರಷ್ಟಾಚಾರ ತೊಲಗಿಸೋಣ**

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
ಗ್ರಾಹಕರ ಹಕ್ಕು ಶಿಕ್ಷಣ ಮತ್ತು ಜಾಗೃತಿ ವೇದಿಕೆ
ನಂ.239,5ನೇ ಸಿ ಮುಖ್ಯರಸ್ತೆ, ರೆಮ್ಕೊ ಬಡಾವಣೆ, ಹಂಪಿನಗರ, ಬೆಂಗಳೂರು-560104,
ದೂರವಾಣಿ : 91-080-23357280, Email :creatorg@sify.com Website : www.creatindia.org